ಮನುಷ್ಯರಲ್ಲೂ ಈ ವ್ಯವಸ್ಥೆಯಿದ್ದಿದ್ದರೆ ಸಾಹಿತಿಗಳ, ರಾಜಕಾರಣಿಗಳ ಮೂಗುಗಳೆಲ್ಲ ಹಗ್ಗದಂತೆ ಮೀಟರ್‌ಗಟ್ಟಲೆ ಬೆಳೆದಿರುತ್ತಿತ್ತು. ಭೀಷಣವಾಗಿ ಭಾಷಣ ಮಾಡುವಾಗ ಅದನ್ನು ಸುರುಳಿ ಸುತ್ತಿ ಪೋಡಿಯಂ ಮೇಲೆ ಇಡಬೇಕಾಗುತ್ತಿತ್ತು. ಆದರೂ ವಿಜ್ಞಾನದ ಪ್ರಕಾರ ಮನುಷ್ಯನ ಸಾವಿನವರೆಗೂ ಆತನ ಮೂಗು ಬೆಳೆಯುತ್ತಲೇ ಇರುತ್ತದಂತೆ. ಹಾಗಾದರೆ ನಿಸ್ಸಂಶಯವಾಗಿ ನಾವೆಲ್ಲರೂ ಸುಳ್ಳುಗಾರರೇ. ಪಿನೋಕಿಯೋ ಕಥೆಯ ಮೂಗು ಹೇಳುವ ನೀತಿ 'ದ ಟ್ರುಥ್ ಸೆಟ್ಸ್ ಯು ಫ್ರೀ'.

'ಮೂಗು ಮಾನವನ ತಂದೆ, ಮೂಗು ಮಾನವನ ತಂದೆ, ಮೂಗು ಮಾನವನ ತಂದೆ' ಬಾಲ್ಯದಲ್ಲಿ ಹೀಗೊಂದು ಕಾಪಿ ಬರೆದ ನೆನಪು. ಮರುದಿನ ಇಡೀ ತರಗತಿ ಸಾಲಾಗಿ ನಿಂತು ಪೆಟ್ಟು ತಿನ್ನಲು ಅಂಗೈ ಒಡ್ಡಿದ ನೆನಪು. 'ಮಗು ಮಾನವನ ತಂದೆ' ಎಂದು ಟೀಚರ್ ಹೇಳಿದ್ದು ಅಕ್ಕಪಕ್ಕದ ಗಲಾಟೆಯಿಂದ ಸರಿಯಾಗಿ ಕೇಳಿಸದೆ ಹೀಗಾಗಿತ್ತು. ಆದರೂ ಮಗು ಮಾನವನ ತಂದೆ ಎಂಬುದಕ್ಕಿಂತ ಮೂಗು ಮಾನವನ ತಂದೆ ಎಂಬುದೇ ನಮಗೆಲ್ಲ ಆಗ ಸರಿ ಕಂಡಿತ್ತು. ಮೂಗಿನಿಂದಲೇ ಅಲ್ಲವೇ ಪ್ರಾಣವಾಯು ಸಂಚರಿಸುವುದು, ಮರಣ ಎಂದರೆ ಈ ಸಂಚಾರವೇ ಸ್ತಬ್ಧವಾಗುವುದು. ಇದಾದರೆ ಸರಿಯಪ್ಪಾ... ಅದು ಬಿಟ್ಟು ಮಗು ಮಾನವನ ತಂದೆಯಾಗಲು ಹೇಗೆ ಸಾಧ್ಯ? ಟೀಚರಿಗೆಲ್ಲೋ ತಲೆ ಕೆಟ್ಟಿದೆ. ಪ್ರಶ್ನೆ ಕೇಳಿದರೆ ಪುನಃ ಅಂಗೈ ಒಡ್ಡಬೇಕಾದ ಸಾಧ್ಯತೆಗಳಿದ್ದುದರಿಂದ ಯಾರು ಯಾರ ತಂದೆಯಾದರೂ ನಮಗಾಗುವ ಲಾಭವೇನು? ಎಂದು ಇಡೀ ತರಗತಿ ಮರುಮಾತನಾಡದೆ ಮಗುವೇ ಮಾನವನ ತಂದೆ ಎಂದು ಒಪ್ಪಿಕೊಂಡಿತ್ತು.

ಮೂಗಡಕಕ್ಕೆ ಆಧಾರ ಕಿವಿಯಾದರೆ ಕಣ್ಣಡಕಕ್ಕೆ ಆಧಾರ ಮೂಗು.

ಪಂಚೇಂದ್ರಿಯಗಳೆಲ್ಲ ಹೀಗೆ ಒಂದಕ್ಕೊಂದು ಸಹಕರಿಸುತ್ತವೆಯಾದರೂ ಮಾಸ್ಕ್ ಮತ್ತೆ ಸ್ಪೆಕ್ಸ್ ಒಟ್ಟಿಗೆ ಇರಲು ಸಾಧ್ಯವಿಲ್ಲ. ಏಕೆಂದರೆ, ಮೂಗಡಕದ ಗರಂ ಹವಾ ಕಣ್ಣಡಕದ ಒಳಗೆ ಬಂದು ಕನ್ನಡಿಯ ತುಂಬ ಕಾವಳ ತುಂಬಿಕೊಂಡು ವೈಪರ್ ಇರುವ ಕನ್ನಡಕ ಇದೆಯೇನಪ್ಪಾ ಎಂದು ವಿಚಾರಿಸುವ ಸ್ಥಿತಿ ನನಗಂತೂ ಒದಗಿಬಂದಿದೆ. ಮೂಗಿಗೆ ಅಂಟಿದ ಒಣ ಸಿಂಬಳ ಕೀಳುವ ಅಭ್ಯಾಸ ಇದ್ದವರಿಗೂ ಈ ಮುಸುಕು ಒಂದು ಅಡಚಣೆಯೇ.

ಹಿಂದೆಲ್ಲ ಘಂಟೆ ಹೊಡೆದಂತೆ ಹಾಡುವ ಕಂಠಗಳಿದ್ದವು. ಈಗ ಮೂಗಿನಲ್ಲಿ ಹಾಡುವ ಗಂಟಲುಗಳೇ ಹೆಚ್ಚು. ನನ್ನ ಅನುಭವದ ಪ್ರಕಾರ ಮೂಗಿನಲ್ಲಿ ಹಾಡಿದ ಹಾಡುಗಳನ್ನು ಹತ್ತು ನಿಮಿಷಕ್ಕಿಂತ ಹೆಚ್ಚು ಕಿವಿಯಲ್ಲಿ ಕೇಳಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಮೂಗೇ ಕಟ್ಟಿಕೊಂಡಷ್ಟು ಕಿರಿಕಿರಿಯಾಗುತ್ತದೆ. ಅದಿರಲಿ... ಶೀತವಾದಾಗ ಮೂಗು ಕೆಂಪಡರುವುದನ್ನು (ಬೇಂದ್ರೆ ತಾತನ ಕ್ಷಮೆ ಕೇಳುತ್ತಾ) ಹೀಗೆ ಹಾಡಿದರೆ ಹೇಗೆ?



'ಮೂಗಿನ ಮಾರಿಗೆ ರಾಗ ರತಿಯಾ ನಂಜ ಏರಿತ್ತಾ...
ಆಗ ಥಂಡಿಯಾಗಿತ್ತಾ... ಆಗ ಥಂಡೀಯಾಗಿತ್ತಾ...'

ಮೂಗಿನಲ್ಲಿ ತಂಗದೆ ಹೊಳ್ಳೆಗಳಿಂದ ಬಳಬಳನೆ ಇಳಿಯುವ ಸಿಂಬಳ ಬಾಲ್ಯದಲ್ಲಿ ಒಂದು ಕಿರಿಕಿರಿಯೇ... ಅದೂ ಕರದಲ್ಲಿ ವಸ್ತ್ರ ಇಲ್ಲದಿದ್ದರಂತೂ... ಪರೀಕ್ಷೆ ಬರೆಯುವಾಗ ಆಗುತ್ತಿದ್ದ ಇದರ ಉಪದ್ರವ ಅನುಭವಿಸಿದವರಿಗೇ ಗೊತ್ತು. ಒಬ್ಬ ಇಂಗ್ಲಿಷ್ ಕವಿ ಹೇಳುತ್ತಾನೆ, 'ಮೂಗು ಮುಖದ ಮೇಲಿರುವುದರಿಂದ ಸಂತೋಷಪಡು...' ಎಂದು. ನಿಜವೇ... ಇದು ಪಾದದ ಕೆಳಗೆಲ್ಲಾದರೂ ಇರುತ್ತಿದ್ದರೆ...??!!! ಯಪ್ಪಾ... ಯಪ್ಪಾ... ವೃಶ್ಚಿಕಾಸನದಂತೆ ಪಾದವನ್ನು ತಲೆಯ ಮೇಲಿಟ್ಟುಕೊಂಡೇ ಸಾಗಬೇಕಿತ್ತು.